International Journal of Kannada Research
www.kannadajournal.com

ISSN: 2454–5813
IJSR 2015; 1(3): 34-37
© 2015 IJKR
www.kannadajournal.com
Received: 09-10-2015
Accepted: 10-11-2015

**Dr. M Chikkanna**
Assistant professor,
Dept of Kannada.
Sri Devaraj urs institute of management, Doddaballapur
Bangalore Rural Dist.

**Correspondence**
**Dr. M Chikkanna**
Assistant professor,
Dept of Kannada.
Sri Devaraj urs institute of management, Doddaballapur
Bangalore Rural Dist.

# ಟಿ.ಕೆ.ರಾಮರಾವ್ ಅವರ ಕಾದಂಬರಿಗಳಪುನರಾವಲೋಕನದ ಪ್ರಸ್ತುತತೆ: ಒಂದು ನೋಟ

**Dr. M Chikkanna**

ಪ್ರಸ್ತುತ ಈ ಪತ್ರಿಕೆಯು ಒಂದು ಕಾಲದಲ್ಲಿ ಜನಮಾನಸದಲ್ಲಿ ಅಚ್ಚಳಿಯದ ಪ್ರಭಾವವನ್ನು ಉಂಟುಮಾಡಿದ್ದ ಕಾದಂಬರಿಕಾರ ಟಿ.ಕೆ.ರಾಮರಾವ್ ಅವರ ಕಾದಂಬರಿಗಳ ಪುನರಾವಲೋಕನದ ಪ್ರಸ್ತುತತೆಯನ್ನು ದಾಖಲಿಸಬಯಸುತ್ತದೆ.ಇಂದು ಅಲ್ಲೊಂದು ಇಲ್ಲೊಂದು ಉಲ್ಲೇಖಗಳನ್ನು ಬಿಟ್ಟರೆ ಟಿ.ಕೆ.ರಾಮರಾವ್ ಅವರ ಹೆಸರು ಮತ್ತು ಅವರ ಕೃತಿಗಳು ಬಹುತೇಕ ಕಣ್ಮರೆಯಾದಂತೆಯೇ ಆಗಿ ಬಿಟ್ಟಿದೆ.ಹೀಗಿದ್ದರೂ 'ಬಂಗಾರದ ಮನುಷ್ಯ' ಹೆಸರು ಕೇಳಿದಾಗ ಅಥವಾ ಇತ್ತೀಚೆಗೆ ಕೆಲವು ಪ್ರಕಾಶಕರು ಅವರ ಜನಪ್ರಿಯ ಕೃತಿಗಳನ್ನು ಪುನರ್‌ಮುದ್ರಣ ಮಾಡಿದಂತಹಾ ಸಂದರ್ಭದಲ್ಲಿ ಕನ್ನಡದ ಓದುಗರು ಅವರನ್ನು ಪೂರ್ತಿಯಾಗಿ ಮರೆತಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಜನಪ್ರಿಯ ಕಾದಂಬರಿಕಾರರಾಗಿದ್ದ ಟಿ.ಕೆ.ರಾಮರಾವ್ ಅವರು ಇಂದು ಅವರು ಪ್ರಸ್ತುತರಾಗುವುದು ಎರಡು ಕಾರಣಗಳಿಂದಾಗಿ. ಮೊದಲನೆಯದು ಅವರ 'ಬಂಗಾರದ ಮನುಷ್ಯ' ಕಾದಂಬರಿಯ ಅಚ್ಚಳಿಯದ ಜನಪ್ರಿಯತೆ ಮತ್ತು ಸಮಕಾಲೀನ ಪ್ರಸ್ತುತತೆಯಿಂದಾಗಿ. ಎರಡನೆಯದು ಇಂದು ಆಧುನಿಕೋತ್ತರ ಸಂದರ್ಭದಲ್ಲಿ ಅಂದಿನ ಪತ್ತೇದಾರಿ ಕಾದಂಬರಿಗಳು ಅಂತರಾಷ್ಟ್ರೀಯ ಮಟ್ಟದಲ್ಲೇ ವಿವಿಧ ನೆಲೆಗಟ್ಟುಗಳಲ್ಲಿ ಬಹಳ ಗಂಭೀರವಾಗಿ ಮರುಪರಿಶೀಲನೆಗೆ ಒಳಪಡುತ್ತಿರುವುದರಿಂದಾಗಿ.

ಒಂದು ಕಾಲದಲ್ಲಿ ಅಪಾರವಾದ ಜನಪ್ರಿಯತೆಯನ್ನು ಗಳಿಸಿಕೊಂಡಿದ್ದ ಟಿ.ಕೆ.ರಾಮರಾವ್(ತುಮಕೂರು ಕೃಷ್ಣಮೂರ್ತಿ ರಾಮರಾವ್) ಅವರು ಅನೇಕರು ತಿಳಿದುಕೊಂಡಿದ್ದಂತೆ ಕೇವಲ ಪತ್ತೇದಾರಿ ಕಾದಂಬರಿಗಳನ್ನೂ ಮಾತ್ರ ಬರೆದವರಲ್ಲ, ಅವರು ಸಾಮಾಜಿಕ ಕಾದಂಬರಿಗಳನ್ನೂ ಬರೆದಿದ್ದರು ಮತ್ತು ಒಂದು ಐತಿಹಾಸಿಕ ಶೈಲಿಯ ಕಾದಂಬರಿಯನ್ನು ಬರೆದಿದ್ದರು.ಜೊತೆಗೆ ಕಿಶೋರ ಸಾಹಿತ್ಯ, ಸಣ್ಣ ಕಥಾ ಪ್ರಕಾರದಲ್ಲಿ ಸಾಮಾಜಿಕ ಮತ್ತು ಪತ್ತೇದಾರಿ ಕಥಾಸಾಹಿತ್ಯಗಳಲ್ಲಿ ಮತ್ತು ಪ್ರವಾಸ ಸಾಹಿತ್ಯದಲ್ಲಿ ತಮ್ಮ ಛಾಪನ್ನು ಮೂಡಿಸಿದ್ದರು ಎಂಬುದನ್ನು ನಾವಿಂದು ಮತ್ತೆ ನೆನಪಿಸಿಕೊಳ್ಳಬೇಕಾಗಿದೆ.

ಟಿ.ಕೆ.ರಾಮರಾವ್ ಅವರ ಒಟ್ಟು ಕಾದಂಬರಿಗಳ ಸಂಖ್ಯೆಯು ಇಂದು ಸರಿಯಾಗಿ ಲಭ್ಯವಿಲ್ಲ. ಒಬ್ಬ ಲೇಖಕನ ಸಮಗ್ರ ಅಧ್ಯಯನಕ್ಕೆ ಇಂತಹ ಮಾಹಿತಿಗಳು ಅಗತ್ಯವಾಗುತ್ತವೆ. ಇತ್ತೀಚೆಗೆ ಮರು ಮುದ್ರಣವಾಗುತ್ತಿರುವ ಅವರ ಕಾದಂಬರಿಗಳ ಪ್ರಸ್ತಾವನೆಯನ್ನು ಅವರ ಒಡನಾಡಿಯೂ ಆಗಿದ್ದ, ಪತ್ರಿಕಾರಂಗದಲ್ಲಿ ಹೆಸರು ಮಾಡಿದ ಲೇಖಕ ಚಿರಂಜೀವಿ ಅವರು ಬರೆದಿದ್ದಾರೆ. ಇದರಲ್ಲಿ ಟಿ.ಕೆ.ರಾಮರಾವ್ ಅವರ ಕಾದಂಬರಿಗಳ ಒಟ್ಟು ಸಂಖ್ಯೆ ೫೩ ಎಂದು ಹೇಳಲಾಗಿದೆ.ಉದಾಹರಣೆಗೆ ಅವರ 'ಕಲ್ಲುಹಾಸಿಗೆ'ಕಾದಂಬರಿಯಪುನರ್ ಮುದ್ರಣ(೨೦೧೨)ವನ್ನು ಗಮನಿಸಬಹುದು.

ಆದರೆ ಈಗ್ಗೆ ಕಳೆದ ಮೂರು ವರ್ಷದಿಂದ "ಟಿ.ಕೆ.ರಾಮರಾವ್ ಅವರ ಕಾದಂಬರಿಗಳು ಮತ್ತು ಸಾಮಾಜಿಕ ಸಂದರ್ಭ"ಎಂಬ ವಿಷಯದ ಬಗ್ಗೆ ಪ್ರಸ್ತುತ ಪ್ರಬಂಧಕಾರನು ಪಿಎಚ್.ಡಿ ಪದವಿಗಾಗಿ ಸಂಶೋಧನೆಯನ್ನು ನಡೆಸುತ್ತಿರುವಾಗ ಅನೇಕ ಕುತೂಹಲಕಾರಿ ಮಾಹಿತಿಗಳು ಲಭ್ಯವಾಗಿವೆ.ಈಗ ಲಭ್ಯವಾಗಿರುವ ಮಾಹಿತಿಯಂತೆ ಅವರ ಒಟ್ಟು ಕಾದಂಬರಿಗಳ ಸಂಖ್ಯೆಯೂ ೫೭ ಎಂದು ಕಂಡುಬರುತ್ತದೆ. ಅವುಗಳು ಯಾವುವೆಂದರೆ,

೧.ದೂರಗಗನ(೧೯೬೬) ೨.ಪಚ್ಚತೋರಣ(೧೯೬೭) ೩.ಆಸರೆಯ ಬೊಂಬೆ(೧೯೬೮) ೪.ಮಧುರ ಮಿಲನ(೧೯೬೮)೫.ಬಂಗಾರದ ಮನುಷ್ಯ(೧೯೭೦) ೬.ಕೋವಿಕುಂಚ(೧೯೭೧)೭.ಮೂರನೇ ಕೀಲಿಕೈ(೧೯೭೧) ೮. ಆಕಾಶದೀಪ(೧೯೭೩) ೯.ವರ್ಣಚಕ್ರ(೧೯೭೩) ೧೦.ಕಪ್ಪುನಾಯಿ(೧೯೭೪) ೧೧.ತೋರುಬೆರಳು(೧೯೭೪) ೧೨.ಶಕುನಪಕ್ಷಿ(೧೯೭೪)೧೩.ಸೀಮಾರೇಖೆ(೧೯೭೪) ೧೪.ಮರಳು ಸರಪಣಿ(೧೯೭೫) ೧೫.ರಾಣಿಜೇನು(೧೯೭೫) ೧೬.ಹಿಮಪಾತ(೧೯೭೬) ೧೭.ದಿಬ್ಬದ

ಬಂಗಲೆ(೧೯೭೭) ೧೮.ಮಣ್ಣಿನದೋಣಿ(೧೯೭೮) ೧೯.ಸರ್ಪದಂಡೆ (೧೯೭೯)೨೦.ಸೀಳುನಕ್ಷತ್ರ(೧೯೭೯)೨೧.ಸೇಡಿನಹಕ್ಕಿ(೧೯೮೦)೨೨.ಚಿತ್ರಾವತಿ(೧೯೮೦)೨೩.ಚುಕ್ಕೆಯ ಪಾರಿವಾಳ(೧೯೮೦) ೨೪.ಜಗದೇವರಾಯ(೧೯೮೧) ೨೫.ಪಶ್ಚಿಮದ ಬೆಟ್ಟ(೧೯೮೧) ೨೬.ಕಹಳೆ ಬಂಡೆ(೧೯೮೧) ೨೭.ಡೊಂಕುಮರ (೧೯೮೨) ೨೮.ಬೆದರುಗೊಂಬೆ (೧೯೮೨) ೨೯.ಕೆಂಪುಮಣ್ಣು(೧೯೮೩) ೩೦.ತಾಳೆಹೂ(೧೯೮೩) ೩೧.ನೆರಳು(೧೯೮೩) ೩೨.ವಜ್ರದ ಕೊಂಬು(೧೯೮೩) ೩೩. ಆಶಾಢ ರಾತ್ರಿಗಳು(೧೯೮೪) ೩೪.ನಿಗೂಢರು(೧೯೮೪) ೩೫.ಪದ್ಮರಾಗ(೧೯೮೪) ೩೬.ಮೂರುಜನ್ಮ(೧೯೮೪) ೩೭. ತ್ರಿಕೋನದ ಮನೆ(೧೯೮೫) ೩೮.ಕಣಿವೆ ಸೇರಿದವಳು(೧೯೮೫) ೩೯.ಕನಸುಗಾರ(೧೯೮೫) ೪೦. ಜೋಡಿಭಾಯೆ(೧೯೮೫) ೪೧.ಪಯಣದ ಕೊನೆ(೧೯೮೬) ೪೨.ಬಣ್ಣದ ಹುಳು(೧೯೮೬) ೪೩.ಅಲೆಮಾರಿ(೧೯೮೭) ೪೪. ಪಶ್ಚಿಮಮುಖಿ(೧೯೮೭) ೪೫.ಹಾವಿಲ್ಲದ ಹುತ್ತ(೧೯೮೮) ೪೬.ಸೋಗುಗಾತಿ(೧೯೮೯) ೪೭.ನಕ್ಷತ್ರಮೀನು(೧೯೯೦) ೪೮. ಅಪ್ಸರ(೧೯೯೨) ೪೯.ನದಿ ತಿರುವು(೧೯೯೩) ೫೦.ಲಂಗರು ೫೧.ಆರಿದ ಲಾಂದ್ರ ೫೨.ದೂರದ ಕರೆ ೫೩.ರಹಸ್ಯ ಪತ್ರ ೫೪.ಹಾವು ಏಣಿ ಆಟ ೫೫.ಭಾಸ್ಕರ ಅಥವಾ ಸೇಡು ೫೬.ಗುಲಾಮ ಹೆಣ್ಣು ೫೭.ಅರ್ಥವಾಗದವ.

ಇವುಗಳಲ್ಲಿ ಕ್ರಮಸಂಖ್ಯೆ ೫೦ರಿಂದ ಕ್ರಮಸಂಖ್ಯೆ ೫೭ರವರೆಗಿನಕಾದಂಬರಿಗಳು ಪ್ರಕಟಗೊಂಡ ಸರಿಯಾದ ಇಸವಿ ತಿಳಿದಿಲ್ಲ. ಭಾಸ್ಕರ ಅಥವಾ ಸೇಡು ಅವರು ವಿದ್ಯಾರ್ಥಿಯಾಗಿದ್ದಾಗ ಬರೆದಿದ್ದಿರಬೇಕು. ಅದು ಈಗ ದೊರಕುವುದಿಲ್ಲ.ಇಲ್ಲಿ ಅವು ಪುಸ್ತಕ ರೂಪದಲ್ಲಿ ಬಂದಿರುವ ಇಸವಿಯನ್ನು ಅನುಸರಿಸಿ ಈ ಪಟ್ಟಿಯನ್ನು ಸಿದ್ಧಪಡಿಸಿ ನೀಡಲಾಗಿದೆ. ಆದರೆ ಇವುಗಳಲ್ಲಿ ಎಷ್ಟೋ ಕಾದಂಬರಿಗಳು ವಿವಿಧ ಪತ್ರಿಕೆಗಳಲ್ಲಿ ಈ ಮೊದಲೇ ಪ್ರಕಟಗೊಂಡಿದ್ದವು. ಅವುಗಳ ಪ್ರಕಟಣೆಯ ನಿಖರ ದಿನಾಂಕವು ಆ ಸಂಚಿಕೆಗಳು ಸಿಗದ ಕಾರಣ ಲಭ್ಯವಾಗಿರುವುದಿಲ್ಲ. ಇನ್ನೂ ಕೆಲವು, ಉದಾಹರಣೆಗೆ 'ಕಪ್ಪುನಾಯಿ ಮತ್ತು ತೋರುಬೆರಳು'(೧೯೭೪), 'ಬೆದರು ಬೊಂಬೆ ಮತ್ತು ಡೊಂಕುಮರ'(೧೯೮೨), 'ವಜ್ರದ ಕೊಂಬು ಮತ್ತು ನೆರಳು'(೧೯೮೩)ಹೀಗೆ ಎರಡೆರಡು ಕಾದಂಬರಿಗಳು ಒಟ್ಟಿಗೆ ಪ್ರಕಟವಾಗಿದ್ದು ಅದರ ಮೊದಲ ಮುದ್ರಣ ನಿಖರವಾಗಿ ತಿಳಿದು ಬರುವುದಿಲ್ಲ. ಉದಾಹರಣೆಗೆ 'ಕಪ್ಪುನಾಯಿ ಮತ್ತು ತೋರುಬೆರಳು' ಕಾದಂಬರಿಗಳ ಸಂಯುಕ್ತ ಪ್ರಕಟಣೆ(೧೯೭೪)ಯ ಮುನ್ನುಡಿಯಲ್ಲಿ ಟಿ.ಕೆ.ರಾಮರಾವ್ ಅವರು "ತೋರುಬೆರಳು ಮತ್ತು ಕಪ್ಪುನಾಯಿ ಇದೆರಡೂ ಪ್ರತ್ಯೇಕವಾಗಿ ಕನ್ನಡದ ಸುಪ್ರಸಿದ್ಧ ಮಾಸಿಕವಾದ ಮಯೂರದಲ್ಲಿ ಎರಡೆರಡು ತಿಂಗಳು ಧಾರಾವಾಹಿಯಾಗಿ ಪ್ರಕಟವಾದ ಕಿರುಕಾದಂಬರಿಗಳು" ಎಂದು ಹೇಳುತ್ತಾರೆ. ಆದರೆ ನಿರ್ದಿಷ್ಟ ವರ್ಷವನ್ನು ಹೇಳುವುದಿಲ್ಲ.

ಹಾಗೆ ನೋಡಿದರೆ ಇವರು 'ಸುಧಾ' ವಾರ ಪತ್ರಿಕೆಯ ಸ್ಪರ್ಧೆಗೆ ಕಳುಹಿಸಿ ಪ್ರಶಸ್ತಿ ಪಡೆದ 'ದಿಬ್ಬದ ಬಂಗಲೆ' ಮಕ್ಕಳ ಕುತೂಹಲಕಾರಿ ಕಾದಂಬರಿಗಳಿಗೆ ಒಂದು ಉತ್ಕೃಷ್ಟ ಮಾದರಿ ಎಂದರೆ ತಪ್ಪಾಗಲಾರದು.ಕನ್ನಡದಲ್ಲಿ ಇಂತಹಾ ಕಾದಂಬರಿಗಳ ಸಂಖ್ಯೆ ಹೆಚ್ಚಿಲ್ಲ. ಮಕ್ಕಳ ಕಾದಂಬರಿಗಳ ಕ್ಷೇತ್ರಕ್ಕೂ ಆಗಲೇ ಬಹು ಜನಪ್ರಿಯರಾಗಿದ್ದ ಈ ಕಾದಂಬರಿಕಾರರು ತಮ್ಮ ಕೊಡುಗೆಯನ್ನು ನೀಡಿದ್ದಾರೆ ಎಂಬುದನ್ನು ಇಲ್ಲಿ ವಿಶೇಷವಾಗಿ ಗುರುತಿಸಿಕೊಳ್ಳಬೇಕಾಗುತ್ತದೆ.

ಅವರ ಇನ್ನಿತರ ಕೊಡುಗೆಗಳನ್ನು ಇಲ್ಲಿ ನೋಡಬಹುದು. ಇದು ಸಾಹಿತಿಯಾಗಿ ಅವರ ಮಹತ್ವವನ್ನು ತಿಳಿಸಿಕೊಡುತ್ತದೆ. ಟಿ.ಕೆ.ರಾಮರಾವ್ ಅವರು ಜನಪ್ರಿಯ ಕಾದಂಬರಿಕಾರರಾಗಿದ್ದಂತೆಯೇವಿವಿಧ ಪತ್ರಿಕೆಗಳಲ್ಲಿ ಕಥೆಗಳನ್ನು ಪ್ರಕಟಿಸುತ್ತಿದ್ದರು. ಅವರು ೧೪ ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ.ಅವುಗಳು ಯಾವುವುವೆಂದರೆ ೧.ಉಬ್ಬರವಿಳಿತ(೧೯೬೫) ೨.ಎತ್ತರದಮನೆಯವನು(೧೯೭೨) ೩.ಮಧುಚಂದ್ರ(೧೯೭೩) ೪.ಬೆಂಕಿಗೂಡು(೧೯೭೪) ೫.ನಾಲ್ಕುರೇಖೆಗಳು(೧೯೭೫) ೬.ಕಲ್ಲುಹಾಸಿಗೆ(೧೯೭೯) ೭.ಎಡದಂಡೆಗೆ(೧೯೮೨) ೮.ಕೊನೆಯಸಾಕ್ಷಿ(೧೯೮೨) ೯.ಕೊಲ್ಲಿಯ ಹಣ(೧೯೮೩) ೧೦.ಅಪರಾತ್ರಿಯ ಆತ್ಮೀಯ(೧೯೮೪) ೧೧.ಶಿಲ್ಪದೃಶ್ಯಗಳು(೧೯೮೫) ೧೩.ಊರುಗೋಲು(೧೯೮೮) ೧೪.ಹಂಬಲ ಚಿಗುರಿತು. ಅಲ್ಲದೆ ಅವರ ಪಡುವಣ ದಿಶೆಗೆ ಬೈರನ್(೧೯೮೮), ಮದ್ದು(೧೯೮೩), ಪಲಾಯನ(೧೯೮೧) ಎಂಬ ಕಥೆಗಳು, ಚಿತ್ತಾರದ ಬಟ್ಟಲು(೧೯೮೮) ಎಂಬ ನೀಳ್ಗತೆಯು ಪ್ರತ್ಯೇಕವಾಗಿ ಪತ್ರಿಕೆಗಳಲ್ಲಿ ಪ್ರಕಟವಾಗಿದೆ.

ಈ ಕಥೆಗಳು ಬಹುತೇಕ ಜನಪ್ರಿಯ ವಾರ ಪತ್ರಿಕೆ, ದಿನಪತ್ರಿಕೆ, ಮಾಸಪತ್ರಿಕೆ, ಪಾಕ್ಷಿಕಗಳಲ್ಲಿ ಪ್ರಕಟವಾಗಿವೆ.ಆದರೆ ಇವು ಇಂತಹ ಪತ್ರಿಕೆಗಳಲ್ಲಿ ಪ್ರಕಟವಾಗಿವೆ ಎಂಬ ಮುನ್ನುಡಿಯ ಮಾತು ಮಾತ್ರ ಸಿಗುತ್ತದೆ ಹೊರತು ನಿರ್ದಿಷ್ಟ ವಿವರ ಲಭ್ಯ ಇಲ್ಲ. ಅಲ್ಲೊಂದು ಇಲ್ಲೊಂದು ಬಿಡಿ ಕಥೆಗಳು ಪ್ರಕಟವಾಗಿರುವುದರ ಮಾಹಿತಿ ಸಿಗುತ್ತದೆ. ಆದರೆ ಒಟ್ಟಾರೆಯಾಗಿ ಅವರ ಕಥೆಗಳು ಕಥಾಸಂಕಲನಗಳ ರೂಪದಲ್ಲಾದರೂ ಲಭ್ಯವಿದೆ ಎಂಬುದು ಸಂತೋಷದ ಸಂಗತಿ. ಇವುಗಳಲ್ಲಿ ಪತ್ತೇದಾರಿ ಕಥೆಗಳ ಸಂಖ್ಯೆಯೇ ಜಾಸ್ತಿ. ಹಾಗೆಂದು ಸಾಮಾಜಿಕ ಕಥೆಗಳನ್ನು ಅವರು ಬರೆದಿಲ್ಲವೆಂದಿಲ್ಲ. ವೇಶ್ಯಾವೃತ್ತಿ, ಬಡತನ, ನಿರುದ್ಯೋಗ ಮೊದಲಾದ ಕೆಲವು ಸಮಕಾಲೀನ ವಸ್ತುವನ್ನು ಅವರು ಆಯ್ದುಕೊಂಡಿದ್ದಾರೆ. ಅವರ ಕಥೆಗಳೂ ಕೂಡ ಅವರ ಕಾದಂಬರಿಗಳಂತೆಯೇ ಅಶ್ಲೀಲತೆಯ ಆರೋಪದಿಂದ ಬಹಳ ದೂರ. ಅವರು ಬಹು ಸುಂದರವಾದ ಪತ್ತೇದಾರಿ ಕಥೆಗಳನ್ನು ಬರೆದಿದ್ದಾರೆ.

ಅವರು ಮಕ್ಕಳ ಸಾಹಿತ್ಯ ರಚನೆಯಲ್ಲಿಯೂ ತೊಡಗಿಸಿಕೊಂಡಿದ್ದರು. ಅವರ ಕೃತಿಗಳಾದ ೧. ಜಿ.ಎಸ್.ತಾತ, ೨. ಲಾಲಾ ಲಜಪತರಾಯ್, ೩. ಟಿ.ವಿ.ಸುಂದರಂ ಅಯ್ಯಂಗಾರ್, ೪. ಶ್ಯಾಮ ಪ್ರಸಾದ್ ಮುಖರ್ಜಿ, ೫. ಸ್ವಾಮಿ ಶಿವಾನಂದ ಮಕ್ಕಳಿಗಾಗಿ ಬರೆದಂತವು. ಸರಳವಾದ ಭಾಷೆಯಲ್ಲಿ ಮಕ್ಕಳ ಮನಮುಟ್ಟುವಂತೆ ಅವರು ಇವುಗಳನ್ನು ಬರೆದಿದ್ದಾರೆ.

ಅವರು ಪ್ರವಾಸ ಕಥನವನ್ನೂ ಬರೆದಿದ್ದಾರೆ. ಅದು ಸುಧಾ ಪತ್ರಿಕೆಯಲ್ಲಿ ಪ್ರಕಟವಾಗಿದೆ. 'ಗೋಳದ ಮೇಲೊಂದು ಸುತ್ತು'ಟಿ.ಕೆ.ರಾಮರಾವ್ ಅವರ ವಿದೇಶ ಪ್ರವಾಸ ಕಥನವಾಗಿದೆ.೧೯೬೯ರ ಕೊನೆಯಲ್ಲಿ ಸುಮಾರು ಎರಡೂವರೆ ತಿಂಗಳುಗಳ ಕಾಲ ನಡೆಸಿದ ಭೂಮಿಯ ಒಂದು ಸುತ್ತಿನ ಅನುಭವಗಳ ಲೇಖನ ಮಾಲೆಯಾಗಿ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಇದರಲ್ಲಿ ಯೂರೋಪ್, ಅಮೇರಿಕ ಹಾಗೂ ಏಷ್ಯಾವನ್ನು ಕುರಿತ ವಿವರಗಳಿವೆ. ಯೂರೋಪ್ ಮತ್ತು ಏಷ್ಯಾದ ರಾಜಧಾನಿ ನಗರಗಳ ವೀಕ್ಷಣೆಗಳಿವೆ. ಅಮೇರಿಕಾದಲ್ಲಿ ಒಂದು ತಿಂಗಳಿಗೂ ಹೆಚ್ಚು ಸಮಯ ಉಳಿಯಲು ,ಸಾಧ್ಯವಾದುದರಿಂದ ಅಲ್ಲಿನ ವಿವರಗಳು ಸ್ವಲ್ಪ ಹೆಚ್ಚು ಬಂದಿವೆ. "ಈ ಕೃತಿ ಸಾಮಾನ್ಯ ಪ್ರಜೆಯನ್ನು ಗಮನದಲ್ಲಿಟ್ಟುಕೊಂಡು ಬರೆದ ಕೃತಿಯಾಗಿದೆ. ಪ್ರಪಂಚ ಪರ್ಯಟನೆ ಮಾಡುವವರಿಗೆ ೧೧ ರಾಷ್ಟ್ರಗಳ ಸಾಮಾಜಿಕ, ರಾಜಕೀಯ ಸಾಂಸ್ಕೃತಿಕ ಬದುಕಿನ ಚಿತ್ರಣವನ್ನು ಈ ಕೃತಿ ನೀಡುತ್ತದೆ."(ಗೋಳದ ಮೇಲೊಂದು ಸುತ್ತು; ೧೯೭೧; ಮುನ್ನುಡಿ) ಎಂಬುದಾಗಿ ಗುರುತಿಸಲಾಗಿದೆ.

ಪುನರಾವಲೋಕನದ ದೃಷ್ಟಿಯಿಂದ ವಿಶೇಷವಾಗಿ ಅವರ 'ಜಗದೇವರಾಯ' ಕಾದಂಬರಿಯನ್ನು ಗಮನಿಸಬಹುದು. 'ಜಗದೇವರಾಯ'ಐತಿಹಾಸಿಕ ಕಾದಂಬರಿಯ ಮಾದರಿಯಲ್ಲಿ

ಬಂದಿದೆ. ಇದು ೧೯೮೧ನೇ ಇಸವಿಯಲ್ಲಿ ಪ್ರಕಟವಾಗಿದೆ. ಇದರ ಮುನ್ನುಡಿಯಲ್ಲಿ ಟಿ.ಕೆ.ರಾಮರಾವ್ ಅವರು ತಾವು ಮಾಡಿದ ಕ್ಷೇತ್ರಕಾರ್ಯದ ಬಗ್ಗೆ ಹೇಳುತ್ತಾರೆ.(ಟಿ.ಕೆ.ರಾಮರಾವ್,೧೯೮೧,ಪು-೫).“ಕಾದಂಬರಿಯಲ್ಲಿ ಕಾಣುವ ಶಿವನಸಮುದ್ರದ ಗಂಗರಾಜನು ಎರಡನೆಯ ಗಂಗರಾಜ ಅಂದರೆ ಕೃಷ್ಣದೇವರಾಯನಿಂದ ಅಡಗಿಸಲ್ಪಟ್ಟ ಗಂಗರಾಜನ ಮೊಮ್ಮಗ, ಇತಿಹಾಸ ಹಾಗು ಸ್ಥಳದ ಘನತೆಯನ್ನು ವೃದ್ಧಿಸುವ ಸಲುವಾಗಿ ಶಿವನಸಮುದ್ರದ ಕೆಲವು ವ್ಯಕ್ತಿಗಳ ಗ್ರಾಮೀಣ ಹೆಸರುಗಳನ್ನು ಹಿತವಾಗಿ ಮಾರ್ಪಡಿಸಿಕೊಂಡಿದ್ದೇನೆ. ಮೈಸೂರು ಗೆಜಟಿಯರ್‌ನ ಒಂದು ಕಡೆ ನಾಗಮಂಗಲವು ಜಗದೇವರಾಯನಿಗೆ ಹದಿನಾರನೆಯ ಶತಮಾನದ ಉತ್ತರಾರ್ಧದಲ್ಲಿ ಸೇರಿತ್ತೆಂಬ ವಾಕ್ಯವಿದೆ.ಆದರೆ ಅದೇ ಗೆಜಟಿಯರ್‌ನ ಮತ್ತೊಂದು ಉಲ್ಲೇಖನ(ಸಂಪುಟ ೫- ಪುಟ-೭೮೫), ಎಪಿಗ್ರಾಫಿಕಾ ಕರ್ನಾಟಕ-ನಾಗಮಂಗಲ, ಮೈಸೂರು ಆರ್ಕಿಯಲಾಜಿಕಲ್ ಇಲಾಖೆಯು ನನಗೆ ೬-೧-೯೮ರಲ್ಲಿ ಬರೆದ ಪತ್ರ, ಮೇಲಾಗಿ ನಾಗಮಂಗಲದ ವಯೋವೃದ್ಧರ ಹೇಳಿಕೆಗಳನ್ನು ಕ್ರೋಡೀಕರಿಸಿ ಪ್ರಸಂಗಗಳನ್ನು ಜಗದೇವರಾಯನ ಸಮಕಾಲೀನ ಕಥನಕ್ಕೆ ಅಳವಡಿಸಿದ್ದೇನೆ. ಅಲ್ಲದೆ ಕಾದಂಬರಿಗೆ ಮುಖ್ಯ ಆಧಾರವು ಮೈಸೂರು ಗೆಜಟಿಯರ್ ಆಗಿದ್ದರೂ, ಘಟನೆಗಳ ವರ್ಣನೆಗಳು ಆಯಾ ಸ್ಥಳಗಳ ಇತಿಹಾಸಗಳ ಆಧಾರದ ಮೇಲೆ ಕಲ್ಪನೆಗಳೊಂದಿಗೆ ಬೆಸೆದು ರಚಿತವಾಗಿವೆ. ಅನಂತಪುರದ ಕಲೆಕ್ಟರ್ ಕಛೇರಿ, ಪೆನುಕೊಂಡೆಯ ಸಬ್ ಕಲೆಕ್ಟರ್ ಕಛೇರಿ, ಅನಂತಪುರದ ಜಿಲ್ಲಾ ಲೈಬ್ರರಿ ಪುಸ್ತಕಗಳ ಅಂಶಗಳು ಮಾತ್ರವಲ್ಲದೆ ಕಡಪ, ತಾಡಪತ್ರಿ, ಅನಂತಪುರ, ಪೆನುಕೊಂಡೆ, ಹಿಂದೂಪುರ ಹಿರಿಯರು, ಹಾಗೂ ಸಾಹಿತಿಗಳಿಂದ ಪಡೆದ ಸಲಹೆಗಳನ್ನೂ ಅಳವಡಿಸಲಾಗಿದೆ.” ಎಂದು ಕಾದಂಬರಿಕಾರರು ಹೇಳಿದ್ದಾರೆ.

ಆದರೆ ಈ ಕಾದಂಬರಿಯು ವಿಮರ್ಶಕರ ಗಮನವನ್ನು ಸೆಳೆದಿಲ್ಲವೆಂದು ತೋರುತ್ತದೆ.ಟಿ.ಕೆ.ರಾಮರಾವ್ ಅವರು ಹೀಗೆ ಕ್ಷೇತ್ರಕಾರ್ಯ ಆಧಾರಿತವಾಗಿ ಕಾದಂಬರಿ ಒಂದನ್ನು ಬರೆದಿದ್ದಾರೆ ಎಂಬ ಉಲ್ಲೇಖವೂ ಕೂಡ ಬಹುಶಃ ಎಲ್ಲೂ ಸಿಗುವುದಿಲ್ಲ. ಹೀಗಾದಾಗ ಒಂದು ಸ್ಥಳೀಯ ಚರಿತ್ರೆಯ ಮುಖ್ಯ ಆಯಾಮವು ಮರೆಯಾಗಿ ಬಿಡುತ್ತದೆ ಎಂಬುದು ಸತ್ಯ. ಜನಪದ ಕ್ಷೇತ್ರದಲ್ಲಿ ಐತಿಹ್ಯಗಳಿಗೆ ಬಹಳ ಮುಖ್ಯ ಸ್ಥಾನವಿದೆ. ಅವರು ಕೇವಲ ರೋಚಕತೆ, ಪತ್ತೇದಾರಿಕೆಯ ನೆಲೆಯಲ್ಲಿ ಮಾತ್ರವಲ್ಲದೆ ಒಂದು ಜವಾಬ್ಧಾರಿಯುತವಾದ ಕ್ಷೇತ್ರಕಾರ್ಯದ ಮೂಲಕ ಈ ಐತಿಹಾಸಿಕ ಕಾದಂಬರಿಯನ್ನು ರಚಿಸಿದ್ದಾರೆ ಎಂಬ ವಿಚಾರವನ್ನು ದಾಖಲು ಮಾಡಬೇಕಾಗಿದೆ.

ಟಿ.ಕೆ.ರಾಮರಾವ್ ಅವರ ಹಲವು ಕಾದಂಬರಿಗಳು ಸಿನಿಮಾಗಳಾಗಿವೆ. ಅವುಗಳೆಂದರೆ ಬಂಗಾರದ ಮನುಷ್ಯ, ಮೂರುಜನ್ಮ, ಸೇಡಿನಹಕ್ಕಿ, ಹಿಮಪಾತ, ಮಣ್ಣಿನದೋಣಿ, ವರ್ಣಚಕ್ರ, ಮರಳುಸರಪಳಿ. ಇವುಗಳ ಪೈಕಿ ಬಂಗಾರದಮನುಷ್ಯ ಪಡೆದ ಜನಪ್ರಿಯತೆ ಅದ್ವಿತೀಯವಾದುದು ಅದರ ಪ್ರಭಾವ ಬಹಳ ಅಪರೂಪವಾದುದು.ಉದಾಹರಣೆಗೆ ಇತ್ತೀಚೆಗೆ ದಿನಾಂಕ ೩೧-೦೫-೨೦೧೩ರಿಂದ ೧೬-೮-೨೦೧೩ರವರೆಗೆ ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ‘ಬಂಗಾರದ ಮನುಷ್ಯ’ ಸಿನಿಮಾದ ಬಗ್ಗೆಯೇ ವಿಶೇಷ ಲೇಖನ ಸರಣಿ ಪ್ರಕಟವಾಗಿತ್ತು. ಅಲ್ಲಿ ಟಿ.ಕೆ. ರಾಮರಾವ್ ಅವರನ್ನೂ ನೆನಪಿಸಿಕೊಳ್ಳಲಾಗಿದೆ. ಸಾಹಿತ್ಯ ಕ್ಷೇತ್ರವು ಅವರನ್ನು ಮರೆತಿದ್ದರೂ ಅವರ ಬಗ್ಗೆ ಜನಸಾಮಾನ್ಯರು ನೆನಪು ಮಾಡಿಕೊಳ್ಳುತ್ತಿದ್ದಾರೆ. ಅವರು ನಮ್ಮನಗಲಿದ ಸಂದರ್ಭದಲ್ಲಿ ಅವರ ಬಗ್ಗೆ ಅಂದಿನ ಪತ್ರಿಕೆಗಳಲ್ಲಿ ಅನೇಕ ಲೇಖನಗಳು ಪ್ರಕಟವಾಗಿದ್ದವು. ಅದೇ ರೀತಿ ಕನ್ನಡ ಪ್ರಭ ದಿನಪತ್ರಿಕೆಯಲ್ಲಿ ಇತ್ತೀಚೆಗೆಅವರ ಪತ್ನಿ ಶಕುಂತಲಾ ಅವರ ದುಸ್ಥಿತಿಯ ಬಗ್ಗೆ ಮನ ಮಿಡಿಯುವ ಸುದ್ದಿ ಪ್ರಕಟವಾಗಿದೆ (ಕನ್ನಡ ಪ್ರಭ ಸೋಮವಾರ ೨೧ ಏಪ್ರಿಲ್ ೨೦೧೪ ಪುಟ-೮).

ಇನ್ನು ಬಂಗಾರದ ಮನುಷ್ಯ ಹಲವರ ಬದುಕಿನ ಮೇಲೆ ಅಪಾರ ಪ್ರಭಾವ ಬೀರಿದೆಯೆಂಬುದನ್ನು ಇಲ್ಲಿ ವಿಶೇಷವಾಗಿ ದಾಖಲಿಸಬೇಕು. ಅದು ಅವರ ಪ್ರಸ್ತುತತೆಗೆ ಕೈಗನ್ನಡಿಯಾಗಿದೆ. ಉದಾಹರಣೆಗೆ ಲೇಖಕರಾದ ಪ.ರಾಮಕೃಷ್ಣ ಅವರು ‘ಬಂಗಾರದ ಮನುಷ್ಯ’ ತನ್ನ ಬದುಕು ಬದಲಿಸಿದ ಬಗ್ಗೆ "ಬದುಕು ಬದಲಿಸಿದ ಬಂಗಾರದ ಮನುಷ್ಯ” ಎಂಬ ಶೀರ್ಷಿಕೆಯಡಿಯಲ್ಲಿ ಹೀಗೆ ಹೇಳುತ್ತಾರೆ: “ಪತ್ರಿಕೋದ್ಯಮದಲ್ಲಿ ಅನ್ನ ಹುಡುಕುವ ಪ್ರಯತ್ನದಲ್ಲಿ ಸಾಪ್ತಾಹಿಕವೊಂದನ್ನು ರೂಪಿಸುವಷ್ಟರಲ್ಲಿ ಮನೆಯ ದುಸ್ಥಿತಿ ಕಂಡು ಬೆಚ್ಚಿಬಿದ್ದೆ. ಹನ್ನೆರಡು ಎಕರೆ ಭೂಮಿ ಇದ್ದರೂ ಹಾಳು ಬಿದ್ದಿತು. ಮನೆ ತುಂಬ ಜನ. ನೌಕರಿ ಬಿಟ್ಟು ಮನೆ ಸೇರಿದೆ. ಅಪ್ಪನಿಗೆ ಮೈತುಂಬ ಸಾಲವಾಗಿತ್ತು. ಸಾಲಗಾರರ ಚುಚ್ಚು ಮಾತುಗಳಿಂದ ನೊಂದುಕೊಂಡದ್ದು ಅಷ್ಟಿಷ್ಟಲ್ಲ. ಇನ್ನು ಈ ಮನೆಯಲ್ಲಿದ್ದರೆ ಊಟವಿಲ್ಲದೆ ಸಾಯಬೇಕಾದೀತು ಎಂಬ ನಿರಾಶೆ ಭಾವನೆ ಕಾಡಿತ್ತು. ಆಗ ಮನೆಗೆ ಸಾಮಾನು ತರುವ ಬಾಳಿಗರ ಅಂಗಡಿಯಲ್ಲಿ ಕಣ್ಣಿಗೆ ಬಿದ್ದದ್ದು ತೂಕಕ್ಕೆ ಬಂದ ಪುಸ್ತಕ ಟಿ.ಕೆ.ರಾಮರಾವ್ ಬರೆದ ‘ಬಂಗಾರದ ಮನುಷ್ಯ’ ಕಾದಂಬರಿ. ಓದುವ ಹಸಿವು ಮಾಸಿರಲಿಲ್ಲ. ಅದನ್ನು ಕೇಳಿದಾಗ, ಬಾಳಿಗರು ‘ತೆಗೆದುಕೊಳ್ಳಿ ಮಾರಾಯರೇ ಅದು ಸಾಬೂನು ಕಟ್ಟಲಿಕ್ಕೂ ಸಾಕಾಗುವುದಿಲ್ಲ. ಕೊಂಡುಹೋಗಿ’ ಎಂದು ಕೊಟ್ಟರು. ಮನೆಗೆ ಬಂದು ಕಾದಂಬರಿ ಓದಿದೆ. ಕಥಾನಾಯಕ ರಾಜೀವ ಕಲ್ಲುನೆಲದಲ್ಲಿ ಹಸಿರಿನ ಬಂಗಾರವನ್ನು ಬೆಳೆದ ಸಾಧನೆಯ ಕಥೆ. ಊರು ಬಿಡಬೇಕೆಂದುಕೊಂಡವನ ಕೈಗೆ ಗುದ್ದಲಿ ಕೊಡಿಸಿತು. ಅದೇ ವರ್ಷ ಸುಧಾರಿತ ತಳಿಯ ಭತ್ತ ಬೆಳೆದೆ. ಇಡೀ ವರ್ಷ ಮನೆ ಮಂದಿಗೆ ಕೂತುಣ್ಣುವಷ್ಟು ಅಕ್ಕಿ ಸಿಕ್ಕಿತು. ಅಡಕೆ ಗಿಡ ಹಾಕಿದೆ. ಒಂದು ಹಲ್ಲರ್ ಹಾಕಿ ಊರವರ ಭತ್ತ ಅಕ್ಕಿ ಮಾಡಿಕೊಟ್ಟು ಬಂದ ಕೂಲಿಯಲ್ಲಿ ಮನೆಯ ಊಟದ ಸಮಸ್ಯೆ ನೀಗಿಸಿದೆ. ೨೫೦ ವಿಭಿನ್ನ ಬಗೆಯ ತೆಂಗು ಬೆಳೆದೆ. ರಬ್ಬರ್ ಕೃಷಿಯೂ ಆಯಿತು. ಹಳ್ಳಿಯ ಮೂಲೆಗೆ ಟೆಲಿಫೋನ್, ವಿದ್ಯುತ್ ತಂದವರಲ್ಲಿ ಮೊದಲಿಗನಾದೆ. ನನ್ನ ಬದುಕಿಗೆ ಹೊಸ ತಿರುವು ನೀಡಿದ ಈ ಕಾದಂಬರಿ ಉದ್ಧಾರ ಮಂತ್ರದ ವೇದವೆಂದೇ ತಿಳಿದಿದ್ದೇನೆ." (ಪ.ರಾಮಕೃಷ್ಣ ಶಾಸ್ತ್ರೀ; ಪ್ರಜಾವಾಣಿ ೧೧.೧೦.೨೦೧೪, ಪುರವಣಿ ಪು.೦೩). ಕರ್ನಾಟಕದ ಮಾಜಿ ಮುಖ್ಯಮಂತ್ರಿ, ಹಿರಿಯ ಚಿತ್ರ ನಿರ್ಮಾಪಕರಾದ ಹೆಚ್.ಡಿ.ಕುಮಾರಸ್ವಾಮಿ ಅವರು "ಟಿ.ಕೆ.ರಾಮರಾವ್ ಕಾದಂಬರಿ ಆಧಾರಿತ‘ಬಂಗಾರದ ಮನುಷ್ಯ’ ಮಾರ್ಚ್ ೧೯೭೨ರಲ್ಲಿ ತೆರೆ ಕಂಡಿತ್ತು ನನ್ನ ಹದಿಮೂರನೆಯ ವಯಸ್ಸಿನಲ್ಲೇ ಈ ಚಿತ್ರವನ್ನು ನೋಡಿದ್ದೆ. ಮನಸ್ಸಿಗೆ ಸ್ಫೂರ್ತಿ ನೀಡುವ ಚಿತ್ರವಿದು. ನಾನು ಅಣ್ಣಾವ್ರ ಅಭಿಮಾನಿ. ಚಿತ್ರ ಮರುಬಿಡುಗಡೆ ಆದಾಗಲೆಲ್ಲಾ ಮತ್ತೆ ಮತ್ತೆ ಈ ಚಿತ್ರವನ್ನು ನೋಡುತ್ತಿದ್ದೆ, ನಾನು ಈ ಚಿತ್ರವನ್ನು ಅರವತ್ತು ಬಾರಿ ನೋಡಿದ್ದೇನೆ” ಎಂದು ಅದು ತನ್ನ ಮೇಲೆ ಬೀರಿದ ಪ್ರಭಾವವನ್ನು ಕುರಿತು ಹೇಳಿದ್ದಾರೆ. (http://kanaja.in/topics#tab3 (P-21) 25-04-2013)

ಕಾದಂಬರಿಯಾಗಿ ಇದು ಒಂದೇ ಕಾದಂಬರಿ ಅವರ ಹೆಸರನ್ನು ಚಿರಸ್ಮರಣೀಯವಾಗಿಸಬಲ್ಲುದು. ಕೃಷಿ ಸಂಸ್ಕೃತಿಯೆಡೆಗಿನ ಮರಳುವಿಕೆ ಇಂದಿನ ದಿನಗಳಲ್ಲಿ ಅತ್ಯಂತ ಪ್ರಸ್ತುತವೆನಿಸುತ್ತದೆ. ನಗರಸಂಸ್ಕೃತಿಯಿಂದ ಮರಳಿ ಮಣ್ಣಿಗೆ ನಡೆಯುವ ಈ ಅದ್ಭುತ ಕಲ್ಪನೆಯ ಯಶಸ್ಸು ಚಲನಚಿತ್ರವಾಗಿ ಮಾಡಿದ ಪ್ರಭಾವ ಬಹುದೊಡ್ಡದು. ಇಂದಿನ ಅನ್ನದಾತರ ಸಾವಿನ ಸರಣಿಯ ಕರಾಳ ದಿನಗಳ ನಡುವೆ ಅಂತಹಾ ಸಾಹಿತ್ಯಕ ಸ್ಫೂರ್ತಿ ಜನಸಮುದಾಯಗಳಲ್ಲಿ ಹೊಸ ಚೈತನ್ಯವನ್ನು ತರಬಲ್ಲದು. ಇದು ಅವರ ಕಾದಂಬರಿಗಳ ಪುನರಾವಲೋಕನದ ಪ್ರಸ್ತುತತೆಯನ್ನು ಎತ್ತಿ ತೋರಿಸುತ್ತದೆ.

ಇಂದು ಜನಪ್ರಿಯ ಕಾದಂಬರಿಗಳನ್ನು ಬೇರೆಯೇ ನೆಲೆಗಟ್ಟಿನಲ್ಲಿ ನೋಡಬೇಕಾದ ಅಗತ್ಯವಿದೆ. ಅಂತಹಾ ಹಲವು ಮುಖ್ಯ

ಪ್ರಯತ್ನಗಳು ಕನ್ನಡದಲ್ಲಿ ಇತ್ತೀಚೆಗೆ ನಡೆಯುತ್ತಿವೆ. ಕನ್ನಡದ ಪತ್ತೇದಾರಿ ಸಾಹಿತ್ಯವನ್ನು ಬೆಳೆಸಿದವರಲ್ಲಿ ಟಿ.ಕೆ.ರಾಮರಾವ್ ಅವರು ಅಗ್ರಗಣ್ಯರು ಎಂಬುದರಲ್ಲಿ ಸಂಶಯವಿಲ್ಲ. ಅನೇಕ ವಿಮರ್ಶಕರು ಟಿ.ಕೆ.ರಾಮರಾವ್ ಅವರ ಪತ್ತೇದಾರಿ ಕಾದಂಬರಿಗಳನ್ನು ಅಂದಿನ ಕಾಲದಲ್ಲಿ ಟೀಕಿಸಿದ್ದರೂ ಕಾಲಕ್ರಮೇಣ ಅವರ ಮಹತ್ವವನ್ನು ಗುರುತಿಸಿದ್ದಾರೆ. ಈ ನೆಲೆಯಲ್ಲಿ ಅವರ ಕಾದಂಬರಿಗಳನ್ನು ಮರುಪರಿಶೀಲನೆ ಮಾಡಬೇಕಾಗಿದೆ.

ಕನ್ನಡದ ಪ್ರಗತಿಶೀಲ ಚಳುವಳಿಯ ಉಚ್ಛ್ರಾಯ ಸ್ಥಿತಿಯಲ್ಲಿ ಇದ್ದಾಗ ಅದು ಅಪಾರ ಪ್ರಮಾಣದ ಓದುಗವಲಯವನ್ನು ನಿರ್ಮಿಸಿತು. ಅದೇ ವೇಳೆಗೆ ಅಗಾಧ ಪ್ರಮಾಣದಲ್ಲಿ ಕತೆಗಳು, ಕಾದಂಬರಿಗಳು ಪ್ರಕಟವಾಗತೊಡಗಿದವು, ಅನೇಕ ಹೊಸ ಲೇಖಕರು, ಲೇಖಕಿಯರು ಇದರಿಂದ ಪ್ರೇರಣೆಗೊಂಡು ತಾವೂ ಬರೆಯಲು ತೊಡಗಿದರು. ಇಂತಹಾ ಸಂದರ್ಭದ ಸಾಧಕ ಬಾಧಕಗಳನ್ನು ಕುರಿತು ಅನೇಕ ವಿದ್ವಾಂಸರು ಚರ್ಚಿಸಿದ್ದಾರೆ (ಎಚ್.ಎಸ್.ರಾಘವೇಂದ್ರ ರಾವ್; ೧೯೯೯;ಪು.೫೪) ಅ.ನ.ಕೃ,ತ.ರಾ.ಸು ಅಂತವರು ಬಹು ಅಮೂಲ್ಯ ಕೊಡುಗೆಯನ್ನು ಆಗ ನೀಡಿದ್ದರು(ವಿದ್ಯಾಶಂಕರ;೨೦೧೦). ಟಿ.ಕೆ.ರಾಮರಾವ್ ಅವರು ಕಾದಂಬರಿಯನ್ನು ಬರೆಯಲು ಪ್ರಾರಂಭ ಮಾಡಿದ್ದು ೧೯೬೬ರಲ್ಲಿ. ಆ ವೇಳೆಗಾಗಲೇ ಪ್ರಗತಿಶೀಲದ ಇತಿಮಿತಿಗಳು ಅರಿವಾಗಿದ್ದವು. ಎಂ ರಾಮಮೂರ್ತಿಯವರ 'ಒಂಬತ್ತಾಣೆ' ಮಾಲೆಯ ಪತ್ತೆದಾರಿ ಕಾದಂಬರಿಗಳು ಬಹಳ ಜನಪ್ರಿಯವಾಗಿದ್ದವು. ಅನೇಕ ಸಾಧಾರಣ ಕಾದಂಬರಿಗಳು ಇದೇ ಮಾದರಿಯನ್ನು ಅನುಸರಿಸಿ ಬಂದಿದ್ದವು ಆದರೆ ಆಗ ಟಿ.ಕೆ.ರಾಮರಾವ್ ತಮ್ಮದೇ ಆದ ಬೇರೆ ದಾರಿಯನ್ನು ನಿರ್ಮಿಸಿಕೊಂಡರು. ಪತ್ತೇದಾರಿ ಮತ್ತು ಸಾಮಾಜಿಕ ಕಾದಂಬರಿಗಳೆರಡನ್ನು ಬರೆದರು. ಸಾಮಾಜಿಕದಂತೆ ಕಾಣುವ ಕೆಂಪು ಮಣ್ಣು, ಮಣ್ಣಿನ ದೋಣಿ ಕಾದಂಬರಿ ಇತ್ಯಾದಿಗಳಲ್ಲಿ ಪತ್ತೇದಾರಿಕೆಯ ಧಾಟಿಯನ್ನು ಬಹಳ ಚೆನ್ನಾಗಿ ಅಳವಡಿಸಿಕೊಂಡರು. ಆದರೆ ಪುಂಖಾನುಪುಂಖವಾಗಿ ಬೇರೆ ಬೇರೆ ಲೇಖಕರ ಕಾದಂಬರಿಗಳು ಬಂದಿದ್ದರಿಂದ ಟಿ.ಕೆ.ರಾಮರಾವ್ ಅವರ ಕಾದಂಬರಿಗಳೂ ಸರಿಯಾದ ವಿಮರ್ಶೆಗೆ ಒಳಪಡಲಿಲ್ಲ. ಒಮ್ಮೊಮ್ಮೆ ಇವರ ಪತ್ತೇದಾರಿ ಕಾದಂಬರಿಗಳು ಕಟ್ಟು ವಿಮರ್ಶೆಗೆ ಒಳಗಾದದ್ದಿವೆ, ಉದಾಹರಣೆಗೆ 'ಮೂರನೆಯಕೀಲಿ ಕೈ' (ಗಿರಡ್ಡಿ ಗೋವಿಂದರಾಜ ೨೦೧೨; ಪು. ೩೯೮-೩೯೯) ಆದರೆ ಅವರ ಕಾದಂಬರಿಗಳನ್ನು ಇಂದಿನ ಬದಲಾದ ದೃಷ್ಟಿಕೋನಗಳಿಗೆ ಅನುಗುಣವಾಗಿ ಒಟ್ಟು ಕನ್ನಡ ಸಾಹಿತ್ಯ ಪರಂಪರೆ ಅನುಲಕ್ಷಿಸಿ ಅಧ್ಯಯನ ಮಾಡಬೇಕಾದ ಅವಶ್ಯಕತೆ ಇದೆ.ಇತ್ತೀಚೆಗೆ ದರ್ಶನ ಪ್ರಕಾಶನ ಬೆಂಗಳೂರು, ಧೃತಿ ಪ್ರಕಾಶನ ಬೆಂಗಳೂರು, ಸೌಮ್ಯ.ಎಂ ಪ್ರಕಾಶನ ಬೆಂಗಳೂರು, ವನಶ್ರೀ ಏಜೆನ್ಸೀಸ್ ಬೆಂಗಳೂರು, ಐ.ಬಿ.ಎಚ್ ಪ್ರಕಾಶನ ಬೆಂಗಳೂರು, ವೈಷ್ಣವಿ ಪ್ರಕಾಶನ ಬೆಂಗಳೂರು, ಹಂಸಧ್ವನಿ ಪ್ರಕಾಶನ ಬೆಂಗಳೂರು, ಮೊದಲಾದವರು ಅವರ ಕಾದಂಬರಿಗಳನ್ನು ಮರು ಮುದ್ರಿಸುತ್ತಿರುವುದು ಸಂತೋಷದ ಸಂಗತಿ.

ತುಮಕೂರು ಕೃಷ್ಣಮೂರ್ತಿ ರಾಮರಾವ್ ಅವರು ಹುಟ್ಟಿದ್ದು ೭-೧೦-೧೯೩೧ರಲ್ಲಿ, ತಂದೆ ಶ್ರೀಕೃಷ್ಣಮೂರ್ತಿ, ತಾಯಿ ಶ್ರೀಮತಿ ನಾಗಮ್ಮ, ಚಿತ್ರದುರ್ಗ ಜಿಲ್ಲೆಯ ಹೊಸದುರ್ಗದಲ್ಲಿ. ಟಿ.ಕೆ.ರಾಮರಾವ್ ಅವರು ಹುಡುಗನಾಗಿದ್ದಾಗ ಅವರಿಗೆ ಬಗೆಬಗೆಯ ಕನಸು ಕಂಡಿದ್ದರು. ವೈದ್ಯರಾಗಿ ಸಮಾಜಸೇವೆ ಮಾಡಬೇಕು, ಸೈನಿಕನಾಗಿ ರೋಮಾಂಚನಕಾರಿ ಜೀವನ ನಡೆಸಬೇಕು. ಕ್ರಿಕೆಟ್ ಕ್ರೀಡಾಪಟುವಾಗಬೇಕು, ಚಿತ್ರನಟನಾಗಬೇಕು ಹೀಗೆ ಹಲವಾರು ಆದರೆ ಅವರು ಪ್ರಾರಂಭದಲ್ಲಿ ಆದದ್ದು ಔಷಧ ವ್ಯಾಪಾರಿ! ನಂತರ ಕನ್ನಡದ ಹೆಸರಾಂತ ಕಾದಂಬರಿಕಾರ! ಎಂಬುದನ್ನು ಇಲ್ಲಿ ಗುರುತಿಸಬೇಕು. ಟಿ.ಕೆ.ರಾಮರಾವ್ ಅವರ ತಂದೆ ತುಮಕೂರು ಕೃಷ್ಣಮೂರ್ತಿ ಅನಿರೀಕ್ಷಿತವಾಗಿ ತೀರಿಕೊಂಡಾಗ ರಾಮರಾವ್ ಅವರು ಬಿಎಸ್.ಸಿ ವಿದ್ಯಾರ್ಥಿ. ಅದಕ್ಕೂ ಒಂದು ವರ್ಷ ಹಿಂದೆ ಅಣ್ಣನೂ ತೀರಿಕೊಂಡಿದ್ದರಿಂದ ರಾಮರಾವ್ ಅವರ ಮೇಲೆ ದೊಡ್ಡ ಸಂಸಾರದ ಭಾರ ಬಿತ್ತು. ರಾಮರಾವ್ ಅವರು ರೈಲ್ವೆಯಲ್ಲಿ ಮಾರ್ಕರ್ ಆಗಿ, ಗುಮಾಸ್ತರಾಗಿ ಮತ್ತು ರೈಲ್ವೆ ಗಾರ್ಡ್ ಉದ್ಯೋಗ ಮದ್ರಾಸ್‌ನಲ್ಲಿ ತಮ್ಮ ಜವಾಬ್ದಾರಿಯನ್ನು ಚೆನ್ನಾಗಿ ನಿರ್ವಹಿಸಿದರು. ಬಿ.ಎಸ್.ಸಿ.(ಗಣಿತಶಾಸ್ತ್ರ) ಪದವಿಮುಗಿಸಿ ಚನ್ನಪಟ್ಟಣದಲ್ಲಿ ಖಾಸಗಿ ಟ್ಯುಟೋರಿಯಲ್ ತರಗತಿ ಆರಂಭಿಸಿದರು, ಅತ್ಯಂತ ಯಶಸ್ವಿಯಾದರು,ನಂತರ ಔಷಧಿ ಅಂಗಡಿ ತೆರೆದರು. ಅಲ್ಲದೆ ಸ್ಕಾಟ್, ಹಾರ್ಡಿ, ಡಿಕನ್ಸ್, ಡ್ಯೂಮಾ, ಮುಂತಾದ ಇಂಗ್ಲೀಷ್ ಕಾದಂಬರಿಕಾರರ ಕೃತಿಗಳನ್ನು ಓದಿದ್ದ ಟಿ.ಕೆ.ರಾಮರಾವ್ ಅವರು ಭಾವಜೀವಿ, ಮನಸ್ಸಿನ ಒತ್ತಡವನ್ನು ಪರಿಹರಿಸಿಕೊಳ್ಳಲು ಅವರು ಲೇಖನಿ ಹಿಡಿದರು, ಕತೆ ಕಾದಂಬರಿ ರಚಿಸಿದರು. ಅವರು ನಮ್ಮನಗಲಿದ್ದೂ ೧೧-೧೧-೧೯೮೮ ರಂದು.ಹೀಗೆ ಸಾಮಾನ್ಯ ಹಿನ್ನೆಲೆಯಿಂದ ಬಂದು ಕನ್ನಡದ ಅತ್ಯಂತ ಜನಪ್ರಿಯ ಬಹುಬೇಡಿಕೆಯ ಕಾದಂಬರಿಕಾರರಾಗಿ ಬೆಳೆದ ಟಿ.ಕೆ.ರಾಮರಾವ್ ಅವರು ನಾವು ಪುನರಾವಲೋಕನ ಮಾಡಲೇಬೇಕಾದ ಒಬ್ಬ ಉತ್ತಮ ಕಾದಂಬರಿಕಾರರು ಎಂಬುದನ್ನು ಮರೆಯುವಂತಿಲ್ಲ. ಇದು ಮರೆತು ಹೋಗುತ್ತಿರುವ ಒಬ್ಬ ಉತ್ತಮ ಕಾದಂಬರಿಕಾರರನ್ನು ಮರು ನೆನಪಿಸಿಕೊಳ್ಳುವ ಮತ್ತು ಅವರ ಪ್ರಸ್ತುತತೆಯನ್ನು ಗುರುತಿಸುವ ಪುಟ್ಟ ಪ್ರಯತ್ನವಾಗಿದೆ.

## ಪರಾಮರ್ಶನ ಗ್ರಂಥಗಳು


1. ಆಮೂರ ಜಿ.ಎಸ್, ಸಮಕಾಲೀನ ಕಥೆ ಕಾದಂಬರಿ ಹೊಸ ಪ್ರಯೋಗಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೧
2. ಕೋಮಲವಲ್ಲಿ ಹು.ರಾ, ತ.ರಾ.ಸು ಅವರ ಸಾಮಾಜಿಕ ಕಾದಂಬರಿಗಳು ಒಂದು ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೮
3. ಗಿರಡ್ಡಿ ಗೋವಿಂದರಾಜ, ಸಮಗ್ರ ವಿಮರ್ಶೆ - ಸಂಪುಟ ೩ ಸಪ್ನ ಬುಕ್ ಹೌಸ್, ಬೆಂಗಳೂರು, ೨೦೧೨.
4. ರಾಘವೇಂದ್ರರಾವ್ ಎಚ್.ಎಸ್, ಪ್ರಗತಿಶೀಲತೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, (ಮ.ಮು) ೧೯೯೯
5. ವಿದ್ಯಾಶಂಕರ ಎಸ್, ಅ.ನ.ಕೃ.ಬದುಕು-ಬರಹ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ೨೦೧೦
6. ಶೇಷಗಿರಿರಾವ್.ಎಲ್.ಎಸ್, ಕಾದಂಬರಿ ಮತ್ತು ಸಾಮಾನ್ಯ ಮನುಷ್ಯ,ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೫೭
7. ಸುದರ್ಶನ ದೇಸಾಯಿ,ಕನ್ನಡದಲ್ಲಿ ಪತ್ತೇದಾರಿ ಸಾಹಿತ್ಯ, ಸುವಿರೇಕ ಪ್ರಕಾಶನ, ಧಾರವಾಡ, ೧೯೮೫.


## ಪತ್ರಿಕಾವರದಿಗಳು


1. ಕನ್ನಡಪ್ರಭ; ೨೧-೦೧-೨೦೧೪.
2. ಪ್ರಜಾವಾಣಿ; ೧೧-೧೦-೨೦೧೪.
3. ವಿಜಯ ಕರ್ನಾಟಕ; ೩೧-೫-೨೦೧೩ ರಿಂದ ೧೬-೦೮-೨೦೧೩.


## ಅಂತರ್ಜಾಲ ತಾಣಗಳು


1. http://www.justbooksclc.com/titles/search_angular?utf8=%E2%9C%93&search_options=All&search_text=ramarao&x=0&y=0 20-04-2013.
2. http://kanaja.in/topics#tab3 (P-21) 25-04-2013.
3. https://en.wikipedia.org/wiki/T._K._Rama_Rao 14-03-2013.
4. https://en.wikipedia.org/wiki/Bangaarada_Manushya 15-03-2013.